ದಿಃ**27.08.2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಆರ್ ಜೆ ವಕೀಲರಿಂದಃ

ನಾನು ವಾಂಚೀರ ಕುಟುಂಬಕ್ಕೆ ಸೇರಿದವರು. ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಯರು ನಮ್ಮ ಕುಟುಂಬದವರು ಅಲ್ಲ. ನನಗೆ ಬಿ ಅರ್ ಅಣ್ಣಯ್ಯನವರ ಪರಿಚಯವಿದೆ. ಸದರಿ ಬಿ ಆರ್ ಅಣ್ಣಯ್ಯನವರ ಹೆಂಡತಿಯ ಹೆಸರು ಮಾಯಮ್ಮ. ಸದರಿ ಬಿ ಆರ್ ಅಣ್ಣಯ್ಯ ಮತ್ತು ಮಾಯಮ್ಮನವರಿಗೆ ಒಟ್ಟು 5 ಜನ ಮಕ್ಕಳು ಇದ್ದಾರೆ.

ಸದರಿ ಅವರ ಪೈಕಿ ಭಾರತಿ ಎನ್ನುವರ ಪರಿಚಯವಿಲ್ಲ. ನಾನು ಸದರಿ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಅವರ ಮಗಳು ಭಾರತಿ ತೀರಿಹೋಗಿದ್ದರು. ಅವರಿಗೆ ಮದುವೆ ಆಗಿತ್ತೊ ಇಲ್ಲವೋ ಎಂಬುವುದು ನನಗೆ ಗೊತ್ತಿಲ್ಲ. ನಾನು ಆಸ್ತಿ ಖರೀದಿ ಮಾಡುವ ಮೊದಲು ಅವರ ಕುಟುಂಬದವರ ಬಗ್ಗೆ ಪರಿಶೀಲನೆ ಮಾಡಿರುತ್ತೇನೆ, ಸಾಕ್ಷಿಯು ಮುಂದುವರಿದು ಅವರು ನಮ್ಮ ಗ್ರಾಮದವರು. ಸದರಿ ಭಾರತಿಯವರಿಗೆ ದಾಮಿನಿ ಮತ್ತು ಭರತ್ ಎನ್ನುವ ಇಬ್ಬರು ಮಕ್ಕಳು ಇದ್ದಾರೆ ಎಂದು ನನಗೇ ಈ ಕೇಸಿನ ಸಮನ್ಸ್ ಬಂದ ಮೇಲೆ ತಿಳಿಯಿತು. ಸದರಿ ಅಣ್ಣಯ್ಯನವರಿಗೆ ಇಬ್ಬರು ಹೆಂಡತಿಯರು ಎಂದು ಗೊತ್ತಿತ್ತು ಆದರೆ 2ನೇ ಹೆಂಡತಿ ಇರಲಿಲ್ಲ. ಸದರಿ ನಾನು ಆಸ್ತಿ ಖರೀದಿ ಮಾಡುವ ಕಾಲಕ್ಕೆ ಅವರ ಹೆಂಡತಿ ಮಾಯಮ್ಮ ಎಂಬುವವರು ಮಾತ್ರ ಇದ್ದರು ಇನ್ನೊಬ್ಬರ ಬಗ್ಗೆ ನನಗೆ ಗೊತ್ತಿಲ್ಲ.

ಸದರಿ ಅಣ್ಣಯ್ಯನ 2ನೇ ಹೆಂಡತಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ದಾಖಲೆಯನ್ನು ಪರಿಶೀಲಿಸಿದ್ದೇನೆ. ಬಿ ಆರ್ ಅಣ್ಣಯ್ಯನ ತಂದೆಯ ಹೆಸರು ಗೊತ್ತಿಲ್ಲ, ದಾಖಲೆ ನೋಡಬೇಕು. ಸರ್ವೆ ನಂ.36/20ಕ್ಕೆ ಸಂಬಂಧಪಟ್ಟ ಮ್ಯೂಟೇಷನ್ ಎಂದರೆ ಸರಿ, ಸದರಿ ಮ್ಯೂಟೇಷನ್ ಯಥಾ ನಕಲನ್ನು ನಿಪಿ 6 ಎಂದು ಗುರುತಿಸಲಾಯಿತು. ನಾನು ಆಸ್ತಿಯನ್ನು ಖರೀದಿ ಮಾಡಿದಾಗ ಆಸ್ತಿಯ ದಾಖಲೆಯನ್ನು ಪರಿಶೀಲಿಸಿದ್ದೆ, ಸದರಿ ಆಸ್ತಿಯ ಪೂರ್ತಿ ದಾಖಲೆ ಮಾಯಮ್ಮನವರ ಹೆಸರಿನಲ್ಲಿ ಇತ್ತು. ಕ್ರಯವಾದ ಸಂದರ್ಭದಲ್ಲಿ ಈಗ ತೋರಿಸಿದ ನಿಪಿ 6 ರ ಮ್ಯೂಟೇಷನ್ ನ್ನು ನಾನು ನೋಡಿಲ್ಲ. ಸದರಿ ಮ್ಯೂಟೇಷನ್ ಪ್ರಕಾರ ಅಣ್ಣಯ್ಯನವರಿಗೆ ತಮ್ಮಣ್ಣ ಎಂಬ ಸಹೋದರ ಇದ್ದ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.36/20ರ ಆಸ್ತಿಯನ್ನು ಅಣ್ಣಯ್ಯ ಮತ್ತು ತಮ್ಮಣ್ಣ ಇಬ್ಬರು ಸೇರಿ ಕ್ರಯಕ್ಕೆ ಪಡೆದದ್ದು ಎಂದು ನನಗೆ ಗೊತ್ತಿಲ್ಲ. ತಮ್ಮಣ್ಣ ನವರಿಗೆ ಮದುವೆ ಆಗಿತ್ತೊ, ಇಲ್ಲವೊ, ಅವರ ಕುಟುಂಬದವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಕ್ರಯ ಪತ್ರಕ್ಕೆ ಸದರಿ ಭಾರತಿಯವರ ವಾರಸುದಾರರಾಗಿಲೀ, ತಮ್ಮಣ್ಣನವರ ವಾರಸುದಾರರಾಗಲೀ ಸಹಿ ಮಾಡಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಅವರ ವಾರಸುದಾರರು ಯಾರು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
**(ರೂಪ ಕೆ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.